Geetha Shishu Shikshana Sangha (R)
**GSSS SIMHA SUBBAMAHALAKSHMI FIRST GRADE COLLEGE**
**KRS ROAD, MYSURU-570 016**

# ಯಶಸ್ YASHAS SSFGC Weekly Newsletter

**Volume -2** **Issue No 42** **08 March 20 2 0**

## ಸಾಧಕ ಮಹಿಳೆ ಶ್ರೀಮತಿ ವನಜ ಬಿ ಪಂಡಿತ್

### Inspirational Women Academic Leaders Awardee



"ASSOCHAM" ಬೆಂಗಳೂರು ಇವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರಿಗೆ ಗೌರವ ಪುರಸ್ಕಾರಗಳನ್ನು ನೀಡಿ ಸನ್ಮಾನಿಸುವುದು ಸಂಪ್ರದಾಯ. ಈ ಬಾರಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗೀತಾ ಶಿಶು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀಮತಿ ವನಜ ಬಿ ಪಂಡಿತ್ ಅವರು "Inspirational Women Academic Leaders" ಪುರಸ್ಕಾರಕ್ಕೆ ಆಯ್ಕೆಯಾಗಿ ವೈಯಕ್ತಿಕ ಸಾಧನೆಯೊಂದಿಗೆ ಜಿ.ಎಸ್.ಎಸ್. ಎಸ್ ಸಮೂಹ ಸಂಸ್ಥೆಗಳ ಗರಿಮೆಯನ್ನು ಹೆಚ್ಚಿಸಿದ್ದಾರೆ. ಕಾರ್ಯದರ್ಶಿಗಳನ್ನು ಶಿಕ್ಷಣ ಸಂಸ್ಥೆಯ ಎಲ್ಲ ಪಧಾದಿಕಾರಿಗಳು, ನೌಕರ ವರ್ಗ, ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



* * * * *








## ಜಿ.ಎಸ್.ಎಸ್. ಎಸ್ ಸಮೂಹ ಸಂಸ್ಥೆಗಳು


Prajavani, 12.03.20, P.No. 5

ಅಸೋಚಾಂ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರಿನ ಜೆಎಸ್‌ಎಸ್‌ಎಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಕಾರ್ಯದರ್ಶಿ ವನಜಾ ಬಿ. ಪಂಡಿತ್ ಅವರಿಗೆ ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಪ್ರಶಸ್ತಿ ಸ್ವೀಕಾರ



ಸಂಭ್ರಮ



ಉತ್ತರ

## ಫಲಪ್ರದ ಪರಿಹಾರ ತರಗತಿಗಳು



ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ ಪಂಡಿತ್ ಅವರು ಶೈಕ್ಷಣಿಕ ಪ್ರಗತಿ ಮತ್ತು ತರಗತಿವಾರು ಫಲಿತಾಂಶಗಳನ್ನು ಪರಿಶೀಲಿಸಿದರು. ಇಲ್ಲಿ ಕಂಡುಬಂದ ಪ್ರಮುಖ ಅಂಶವೆಂದರೆ ಅಂತಿಮ ಬಿ.ಕಾಂ ತರಗತಿಯ ಒಟ್ಟಾರೆ ಫಲಿತಾಂಶದಲ್ಲಿ ಇಳಿಮುಖವಾಗಿದ್ದು, ಇದನ್ನು ಪರಿಹರಿಸಲು ಅಗತ್ಯವಾದ ಪರಿಹಾರ ತರಗತಿಗಳನ್ನು ನಡೆಸುವುದರ ಮೂಲಕ ಮತ್ತು ವಿಷಯ ಅಧ್ಯಾಪಕರುಗಳಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ವೈಯಕ್ತಿಕ ಗಮನಹರಿಸಿದರೆ ಉತ್ತಮ ಫಲಿತಾಂಶವನ್ನು ಪಡೆಯಬಹುದೆಂಬ ಸುಳಿವು ದೊರೆತಂತಾಯಿತು.



ಹೀಗೆ, ವಿಶೇಷ ಪರಿಹಾರ ತರಗತಿಗಳು ದಿನಾಂಕ : 17.02.2020 ರಿಂದ ಆರಂಭಗೊಂಡವು. ಆರಂಭದಲ್ಲಿ ಅಂತಿಮ ವರ್ಷದ ಬಿ.ಕಾಂ ತರಗತಿಯ ಒಟ್ಟು 21 ವಿದ್ಯಾರ್ಥಿಗಳನ್ನು 5 ವಿದ್ಯಾರ್ಥಿಗಳ 4 ಗುಂಪುಗಳಾಗಿ ವಿಂಗಡಿಸಲಾಯಿತು. ಈ ಗುಂಪುಗಳ ನಿರ್ವಹಣೆಗಾಗಿ ನಾಲ್ಕು ಜನ ಅಧ್ಯಾಪಕರನ್ನು ಗುರುತಿಸಿ ಅವರ ಪ್ರಗತಿ ಮತ್ತು ಅಧ್ಯಯನದ ವರದಿಯನ್ನು ಪ್ರತಿದಿನ ಪಡೆಯಲಾಗುತ್ತಿದೆ. ಪ್ರತಿದಿನ ಒಬ್ಬ ಅಧ್ಯಾಪಕ ಎರಡು ಗುಂಪುಗಳನ್ನು ಪುನರಾವರ್ತಿತ ಪದ್ಧತಿಯಲ್ಲಿ ಭೇಟಿಯಾಗುತ್ತಾರೆ. ಆರಂಭದಲ್ಲಿ ನಿರಾಸಕ್ತಿ ತೋರಿದ ವಿದ್ಯಾರ್ಥಿಗಳು ನಿಧಾನವಾಗಿ ಪರಿಹಾರ ತರಗತಿಗಳನ್ನು ತಮ್ಮ ದಿನ ನಿತ್ಯದ ಅಧ್ಯಯನದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡರು. ವಿಷಯ ರುಚಿ ಹತ್ತಿದ ನಂತರ ವಿದ್ಯಾರ್ಥಿಗಳೆಲ್ಲರೂ ಬಹಳ ಸಂಯಮದಿಂದ ಅಭ್ಯಾಸ ನಿರತರಾಗಿದ್ದಾರೆ. ಜೊತೆಗೆ, ಅಧ್ಯಯನ ಮತ್ತು ವಿಷಯಗಳು ಕಷ್ಟ ಎನ್ನುತ್ತಿದ್ದವರೆಲ್ಲ ಸಾಕಷ್ಟು ಅಭ್ಯಾಸದ ಕಡೆಗೆ ಈಗ ಆಸಕ್ತರಾಗಿದ್ದಾರೆ. ಪರಿಹಾರ ತರಗತಿಗಳ ಸದುಪಯೋಗವನ್ನು ಎಲ್ಲ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದಾರೆ.



ಮುಖ್ಯವಾಗಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಒಂದು ಅನೌಪಚಾರಿಕ ಶೈಕ್ಷಣಿಕ ಬಾಂಧವ್ಯಕ್ಕೆ ಈ ಪ್ರಕ್ರಿಯೆಯಿಂದ ಒತ್ತು ಸಿಕ್ಕಿದೆ. ಪರಿಹಾರವಾಗದೇ ಉಳಿದುಹೋಗಬಹುದಾದ ಗೊಂದಲಗಳಿಗೆ ಪರಿಹಾರ ತರಗತಿಗಳು ಉತ್ತರ ಒದಗಿಸಿವೆ. ಕೇವಲ ಬೋಧನೆ ಮಾತ್ರವಾಗಿರದೆ ಪರೀಕ್ಷಾ ದೃಷ್ಟಿಯಿಂದಲೂ ಮುಖ್ಯವಾದ ವಿಚಾರಗಳ ಮೇಲೆ ಬೆಳಕು ಚೆಲ್ಲಿ ಪ್ರಾಯೋಗಿಕವಾಗಿ ಉತ್ತರ ಬರೆಸುವುದರ ಕಡೆಗೂ ಗಮನಹರಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಇದ್ದ ವಿಷಯ ಕೀಳರಿಮೆಯಾಗಲಿ, ಗೊತ್ತೆಂಬ ಆಹಂ ಅಗಲಿ ಕಣ್ಮರೆಯಾಗುತ್ತಾ ಸಾಗಿರುವುದು ಎಲ್ಲರಿಗೂ ಮೆಚ್ಚುಗೆ ತರುವ ಸಂಗತಿಯಾಗಿದೆ. ಇನ್ನು ಪ್ರಥಮ ಮತ್ತು ದ್ವಿತೀಯ ವರ್ಷದ ತರಗತಿಗಳನ್ನು ಭಾಷಾ ಬೋಧಕರು ನಿರ್ವಹಣೆ ಮಾಡುತ್ತಲೇ ಅರ್ಥವಾಗದ ವಿಷಯಗಳನ್ನು ಸಂಬಂಧಿಸಿದ ಅಧ್ಯಾಪಕರುಗಳೊಂದಿಗೆ ಚರ್ಚಿಸಿ ವಿದ್ಯಾರ್ಥಿಗಳು ಪರಿಹಾರಕಂಡುಕೊಳ್ಳುತ್ತಿದ್ದಾರೆ.



ಪರಿಹಾರ ತರಗತಿಗಳ ಉಸ್ತುವಾರಿಯನ್ನು ನಿರ್ದೇಶಕರು ಮತ್ತು ಪ್ರಾಂಶುಪಾಲರು ವಿಶೇಷ ಕಾಳಜಿಯಿಂದ ನೋಡಿಕೊಳ್ಳುತ್ತಿರುವುದು ಶೈಕ್ಷಣಿಕ ಪ್ರಗತಿಗೆ ಪೂರಕವಾಗಿದೆ. ಅಧ್ಯಾಪಕ ಸಿಬ್ಬಂದಿಗೆ ಇದು ಹೆಚ್ಚುವರಿ ಜವಬ್ದಾರಿಯಾಗಿದ್ದು, ಶೈಕ್ಷಣಿಕ ಪ್ರಗತಿ ಎಲ್ಲರ ಬದ್ಧತೆಯಾಗಿರುವುದರಿಂದ ಅವರು ಕೂಡ ಅರ್ಥಪೂರ್ಣ ಪಾಲುದಾರಿಕೆಯನ್ನು ತೋರಿಸಿದಂತಾಗಿದೆ.



ದಿನಾಂಕ : 05.03.2020 ರಂದು ಕಾಲೇಜಿನ ನಿರ್ದೇಶಕರ ಕೊಠಡಿಯಲ್ಲಿ ಅಧ್ಯಾಪಕರ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯಲ್ಲಿ ಫಲಿತಾಂಶವನ್ನು ಉತ್ತಮಿಕರಿಸುವ ನಿಟ್ಟಿನಲ್ಲಿ ಕೈಗೊಂಡಿದ್ದ ವಿಶೇಷ ತರಗತಿಗಳ ಪ್ರಗತಿಯನ್ನು ಕುರಿತು ಚರ್ಚಿಸಲಾಯಿತು. ಅಧ್ಯಾಪಕರುಗಳಿಂದ ಮಾಹಿತಿ ಪಡೆದ ನಿರ್ದೇಶಕರು ಮತ್ತು ಪ್ರಾಂಶುಪಾಲರು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಆಳವಡಿಸುವ ಬಗೆಗೆ ಚರ್ಚಿಸಿದರು. ಮುಂದುವರಿದು ಸಿ–2 ಪರೀಕ್ಷೆಯ ವೇಳಾಪಟ್ಟಿ ಮತ್ತು ಕ್ಯಾಂಪಸ್ ಆಯ್ಕೆಗೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಡುವುದರ ಬಗೆಗೂ ಸಭೆಯಲ್ಲಿ ಚರ್ಚಿಸಲಾಯಿತು.

* * * * *

## ಮಾರ್ಚ್ ತಿಂಗಳ ವಿದ್ಯಾರ್ಥಿ ಸಂಸತ್‌ಗೆ ಅಧಿಕಾರ ಹಸ್ತಾಂತರ

ನೂತನ ವಿದ್ಯಾರ್ಥಿ ಸಂಸತ್‌ಗೆ ಅಧಿಕಾರ ಹಸ್ತಾಂತರ ಮಾಡಲಾಯಿತು. ತಿಂಗಳ ನೂತನ ವಿದ್ಯಾರ್ಥಿ ಸಂಸತ್ ಪ್ರಧಾನ ನಾಯಕರಾಗಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ಕುಮಾರಿ ನಿಖಿತಾ ಎಂ , ಉಪ ಪ್ರಧಾನ ನಾಯಕರಾಗಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿ ನಾಗೇಶ್ ಮೂರ್ತಿ ಎಂ ಮತ್ತು ಪ್ರಥಮ ಬಿಬಿಎ ವಿದ್ಯಾರ್ಥಿ ಹರ್ಷಕುಮಾರ್ ಅವರು ಆಯ್ಕೆಗೊಂಡರು, ಪ್ರಥಮ ಬಿಬಿಎ ತರಗತಿ ನಾಯಕರಾಗಿ ಆಭಿಷೇಕ್, ಉಪ ನಾಯಕರಾಗಿ ಹರ್ಷಕುಮಾರ್, ಪ್ರಥಮ ಬಿಸಿಎ ತರಗತಿ ನಾಯಕರಾಗಿ ಅಪೂರ್ವ ಆರ್.ಪಿ, ಉಪ ನಾಯಕರಾಗಿ ರಚನಾ ಎಂ.ಎಸ್. ಪ್ರಥಮ ಬಿಕಾಂ ತರಗತಿ ನಾಯಕರಾಗಿ ಶಶಿಕಲಾ, ಉಪ ನಾಯಕರಾಗಿ ದೀಪಿಕಾ, ದ್ವಿತೀಯ ಬಿಕಾಂ ತರಗತಿ ನಾಯಕರಾಗಿ ನಾಗೇಶ್ ಮೂರ್ತಿ, ಉಪ ನಾಯಕರಾಗಿ ನಿಖಿತಾ, ತೃತೀಯ ಬಿಕಾಂ ತರಗತಿ ನಾಯಕರಾಗಿ ಮಹಮ್ಮದ್ ಉಮರ್, ಉಪ ನಾಯಕರಾಗಿ ಅಬ್ದುಲ್ ಅಜಿಂ, ಆಯ್ಕೆಗೊಂಡರು. ಈ ಪ್ರಕ್ರಿಯೆಯನ್ನು ವಿದ್ಯಾರ್ಥಿ ಸಂಸತ್‌ನ ಸಂಚಾಲಕರಾದ ಪ್ರೊ.ಅನಿಲ್ ಅವರು ನೇರವೇರಿಸಿಕೊಟ್ಟರು.



* * * * *

ಟಿ.ಟಿ.ಎಲ್ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ವಿಭಾಗ ಆಯೋಜಿಸಿದ್ದ 'ಸಮೃದ್ಧಿ 2020' ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ಹಬ್ಬದ ಅಂಗವಾಗಿ ನಡೆದ "ಟಿ20 ಕ್ರಿಕೆಟ್" ಪಂದ್ಯಾವಳಿಯಲ್ಲಿ ನಮ್ಮ ವಿದ್ಯಾರ್ಥಿಗಳು ಜಯಶಾಲಿಗಳಾಗಿದ್ದಾರೆ. ಕ್ರಿಕೆಟ್ ಕ್ರೀಡೆಯಲ್ಲಿ ವಿಜೇತರಾದವರನ್ನು, ಕಾಲೇಜಿನ ನಿರ್ದೇಶಕರು, ಪ್ರಾಂಶುಪಾಲರು ಮತ್ತು ಅಧ್ಯಾಪಕ ವೃಂದದವರು ಅಭಿನಂದಿಸಿದ್ದಾರೆ.

* * * * *

## ಪ್ರಗತಿ ಪರಿಶೀಲನೆ

ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ವನಜ ಬಿ. ಪಂಡಿತ್ ಅವರು ಶೈಕ್ಷಣಿಕ ಪ್ರಗತಿ ಪರಿಶೀಲನೆ ನಡೆಸಿದರು. ಪ್ರತಿಯೊಂದು ತರಗತಿ, ವಿಷಯ ಅಧ್ಯಾಪಕರಗಳೊಂದಿಗೆ ಸಮಾಲೋಚಿಸಿದರು. ಅಧ್ಯಯನದಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಷಯ ಅಧ್ಯಾಪಕರುಗಳಿಂದ ಪರೀಕ್ಷಾಕೇಂದ್ರಿತವಾದ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಉತ್ತಮ ಫಲಿತಾಂಶದ ಕಡೆಗೆ ಎಲ್ಲ ಅಧ್ಯಾಪಕರುಗಳು ಶ್ರಮಿಸಬೇಕೆಂದು ಸೂಚಿಸಿದರು. ಇವರೊಂದಿಗೆ ಕಾಲೇಜಿನ ನಿರ್ದೇಶಕರು ಮತ್ತು ಪ್ರಾಂಶುಪಾಲರುಗಳು ಉಪಸ್ಥಿತರಿದ್ದರು.





## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಚಿತ್ರ ಕಲಾ ಮತ್ತು ಪ್ರಬಂಧ ಸ್ಪರ್ದೆಯನ್ನು ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ದೆಯಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ನಿಸರ್ಗ ವೈ.ಎಂ ಪ್ರಥಮ ಸ್ಥಾನವನ್ನು, ಕು. ಮಮತ ವಿ.ಎಚ್ ದ್ವಿತೀಯ ಸ್ಥಾನ ಪಡೆದರು. ಪ್ರಬಂಧ ಸ್ಪರ್ದೆಯಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ಲಿಖಿತ ಎಂ ಅವರು ಪ್ರಥಮ ಸ್ಥಾನವನ್ನು, ಕು. ಭವಾನಿ ದ್ವಿತೀಯ ಸ್ಥಾನ ಪಡೆದುಕೊಂಡರು. ಈ ಸ್ಪರ್ದೆಗಳ ನಿರ್ವಹಣೆಯನ್ನು ಪ್ರೊ.ಅನಿಲ್ ಅವರು ನಿರ್ವಹಿಸಿದರು. ವಿಜೇತ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ, ನಿರ್ದೇಶಕರು ಮತ್ತು ಪ್ರಾಂಶುಪಾಲರು ಅಭಿನಂದಿಸಿದರು.

### ವಿಜೇತ ಚಿತ್ರಗಳು




ಕು. ಮಮತ ದ್ವಿತೀಯ ಬಿ.ಕಾಂ.




ಕು. ನಿಸರ್ಗ ವೈ . ಎಂ ದ್ವಿತೀಯ ಬಿ.ಕಾಂ.

* * * * *

### ಪರಿಹಾರ ತರಗತಿಗಳು



ಪ್ರಥಮ ಬಿ.ಕಾಂ ಮತ್ತು ಬಿಬಿಎ



ಪ್ರಥಮ ಬಿಸಿಎ



ದ್ವಿತೀಯ ಬಿ.ಕಾಂ



ಅಂತಿಮ ಬಿ.ಕಾಂ



ಅಂತಿಮ ಬಿ.ಕಾಂ




ಅಂತಿಮ ಬಿ.ಕಾಂ

# Coronavirus




Coronaviruses (CoV) are a large family of viruses that cause illness ranging from the common cold to more severe diseases such as Middle East Respiratory Syndrome (MERS-CoV) and Severe Acute Respiratory Syndrome (SARS-CoV). A novel coronavirus (nCoV) is a new strain that has not been previously identified in humans.

Coronaviruses are zoonotic, meaning they are transmitted between animals and people. Detailed investigations found that SARS-CoV was transmitted from civet cats to humans and MERS-CoV from dromedary camels to humans. Several known coronaviruses are circulating in animals that have not yet infected humans.



Common signs of infection include respiratory symptoms, fever, cough, shortness of breath and breathing difficulties. In more severe cases, infection can cause pneumonia, severe acute respiratory syndrome, kidney failure and even death.


Standard recommendations to prevent infection spread include regular hand washing, covering mouth and nose when coughing and sneezing, thoroughly cooking meat and eggs. Avoid close contact with anyone showing symptoms of respiratory illness such as coughing and sneezing.

ಕೊರೊನಾವೈರಸ್ ಕಾಯಿಲೆ ಚೀನಾ ಇರಾನ್, ಥಾಯ್‌ಲ್ಯಾಂಡ್, ದಕ್ಷಿಣ ಕೊರಿಯಾ, ಜಪಾನ್, ಭಾರತವನ್ನು ಸೇರಿ ಬಹುಪಾಲು ಜಗತ್ತಿನ ಎಲ್ಲ ದೇಶಗಳಲ್ಲಿ ಪತ್ತೆಯಾಗಿದೆ, ಈ ಕಾಯಿಲೆ ಹರಡುವುದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಬಗ್ಗೆ, ವಿಶ್ವ ಆರೋಗ್ಯ ಸಂಸ್ಥೆ ಮಾರ್ಗದರ್ಶನಗಳನ್ನು ನೀಡುತ್ತಿದೆ.

ವಿಶ್ವದಲ್ಲಿ ಆತಂಕ ಮೂಡಿಸಿರುವ ಈ ಹೊಸ ಬಗೆಯ ವೈರಸ್ ಪ್ರಾಣಿಗಳಿಂದ ಅಥವಾ ಚೀನಾದ ಮಾರುಕಟ್ಟೆಯಲ್ಲಿ ದೊರೆಯುತ್ತಿರುವ ಸಮುದ್ರಾಹಾರಗಳಿಂದ ಮನುಷ್ಯನಿಗೆ ಹರಡುತ್ತಿರಬಹುದು ಎಂದು ವೈದ್ಯಕೀಯ ಲೋಕವು ಹೇಳಿದೆ. ಆದರೆ ಈ ವೈರಸ್ ಮನುಷ್ಯನ ಶರೀರದಲ್ಲಿ ಹೇಗೆ ಸೇರಿಕೊಳ್ಳುತ್ತಿದೆ ಎಂಬುವುದರ ಬಗ್ಗೆ ಇನ್ನೂ ನಿಖರವಾದ ಮಾಹಿತಿ ಲಭ್ಯವಾಗಿಲ್ಲ. ಈಗ ಕಂಡು ಬರುತ್ತಿರುವ ಈ ಹೊಸ ವೈರಸ್ 2003ರಲ್ಲಿ ಕಂಡು ಬಂದ SARS-CoV (Severe acute respiratory syndrome Coronavirus) ಎಂಬ ವೈರಸ್‌ನ ಕುಟುಂಬಕ್ಕೆ ಸೇರಿದ್ದಾಗಿರಬಹುದು ಎಂದು ವೈದ್ಯಕೀಯ ಸಂಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಕೊರೊನಾ ಸೋಂಕಿತ ವ್ಯಕ್ತಿ ಜತೆಗೆ ಇದ್ದವರ ಬಗ್ಗೆಯೂ ಮಾಹಿತಿ ಪಡೆಯಲಾಗಿದೆ. ಸೋಂಕಿತ ವ್ಯಕ್ತಿ ವಿವರವನ್ನು ಅಧಿಕಾರಿಗಳಿಂದ ಪಡೆದಿದ್ದೇನೆ. ರಾಜ್ಯದಲ್ಲಿ ಕೊರೊನಾ ವೈರಸ್ ಕುರಿತು ಆತಂಕಪಡುವ ಅಗತ್ಯವಿಲ್ಲ. -ಶ್ರೀರಾಮುಲು, ಆರೋಗ್ಯ ಸಚಿವ



**ಭಯಪಡುವ ಅಗತ್ಯವಿಲ್ಲ: ಮೋದಿ**

ಕೊರೊನಾ ವೈರಸ್ ಭಾರತದಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದರಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಜನರು ಭಯಪಡುವ ಅಗತ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ. ಕೊರೊನಾ ವೈರಸ್ ದೇಶದಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮಂಗಳವಾರ ಪರಿಶೀಲನಾ ಸಭೆ ನಡೆಸಿ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಭಾರತಕ್ಕೆ ಆಗಮಿಸುವ ಜನರನ್ನು ಪರೀಕ್ಷಿಸುವುದರಿಂದ ಹಿಡಿದು ತ್ವರಿತ ವೈದ್ಯಕೀಯ ಚಿಕಿತ್ಸೆ ನೀಡುವವರೆಗೆ ವಿವಿಧ ಸಚಿವಾಲಯಗಳು ಮತ್ತು ರಾಜ್ಯಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.



**ಕೊರೊನಾ ಭಯ ಬಿಡಿ: ಜಿಲ್ಲಾಧಿಕಾರಿ**

ಮೈಸೂರು: ಜಿಲ್ಲೆಯಲ್ಲಿ ಕೊರೊನಾ ವೈರಸ್ ತಡೆಯಲು ಹೆಚ್ಚಿನ ಎಚ್ಚರಿಕೆ ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಆತಂಕ ಪಡಬೇಕಿಲ್ಲ ಎಂದು ಡಿಸಿ ಅಭಿರಾಮ್ ಜಿ. ಶಂಕರ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಕೊರೊನಾ ಸೋಂಕಿಗೆ ಸಂಬಂಧಿಸಿದಂತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮುಖ್ಯ ಕಾರ್ಯದರ್ಶಿಗಳು ಸಭೆ ನಡೆಸಿದ್ದು, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮುಂಜಾಗ್ರತಾ ಕ್ರಮವಹಿಸುವಂತೆ ಸೂಚಿಸಿದ್ದಾರೆ. ಜಿಲ್ಲೆಯಲ್ಲಿ ಈವರೆಗೆ ಯಾವುದೇ ರೀತಿಯ ಕೊರೊನಾ ಸೋಂಕು ಬಾಧಿತ ಪ್ರಕರಣಗಳು ಪತ್ತೆಯಾಗಿಲ್ಲ ಎಂದರು.

▸▸ 8

Date: 04.03.2020

## Unicef

1. **Corona virus** is large in size where the cell diameter is 400-500 micro and for this reason ***any mask prevents its entry***
2. The virus does not settle in the air but is grounded, so it is ***not transmitted by air***.
3. Coronavirus when it falls on a metal surface, it will live 12 hours, so ***washing hands with soap*** and water well enough.
4. Corona virus when it falls on the fabric remains 9 hours, so ***washing clothes* or *being exposed to the sun for two hours*** meets the purpose of killing it.
5. The virus lives on the hands for 10 minutes, so putting an ***alcohol sterilizer*** in the pocket meets the purpose of prevention.
6. If the virus is exposed to a temperature of 26-27°C. it will be killed, as it does not live in hot regions. Also ***drinking hot water and sun exposure*** will do the trick And ***stay away from ice cream and eating cold*** is important.
7. ***Gargle with warm and salt water*** kills the tonsils' germs and prevents them from leaking into the lungs.
8. Adherence to these instructions fulfils the purpose of preventing viruses.

“ಆರೋಗ್ಯ ಭಾಗ್ಯವನು ಮನಕೆ ತನುಗೆಂತಂತೆ
ಹಾರಯಿಸುವೊಡೆ ಹಲವು ಸರಳ ನೀತಿಗಳ
ಧಾರಯಿಸು ನೆನಸಿನಲಿ ನುಡಿಯಲ್ಲಿ ನಡತೆಯಲಿ
ಪಾರಾಗು ಸುಳಿಯಿಂದ”

‘ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ಕೆಲವು ಸರಳ ನೀತಿಗಳನ್ನು ಪಾಲಿಸುವಂತೆ, ಕೆಲವು ಸರಳ ಸೂತ್ರಗಳನ್ನು ಪಾಲಿಸುವುದರಿಂದ ಮನದ ಆರೋಗ್ಯವನ್ನೂ ಬದುಕಿನಲ್ಲಿ ಸುಪಳಿಯಂತಹ ಸ್ಥಿತಿಗಳಲ್ಲಿ ಸಿಲುಕಿಕೊಳ್ಳದೆ ಪಾರಾಗು ಎಂದಿದ್ದಾರೆ ಮಹನೀಯರು.’

ಕೃಪೆ : ಕಗ್ಗ



**Chief Editor**
Prof K U Basappa, Principal

**Executive Editor**
Mr Mahadeva K M., HOD, Dept of Kannada
Mr Subramanya K R, HOD, Dept of BBA
Mr Sampath Kumar , Librarian

**Photo courtesy**
Dr. Prabhakara K V, Priyanka M N
Prof Anil M, Namith P

**P HOTO CORNER**

